# ಚಟ್ನಿ ಮಾಡುವುದು ಕಷ್ಟವೇನಲ್ಲ!



**ಆಹಾರ ಮತ್ತು ಮನುಷ್ಯ ಸಂಬಂಧಗಳೆಂಬ ಎರಡು ಎಳೆಗಳನ್ನು ಬಿಗಿಯಾಗಿ ಹೆಣೆಯುತ್ತಲೇ ತುತ್ತ ತುದಿಯಲ್ಲಿ ಬೆಚ್ಚಿಬೀಳಿಸುವ ಕಿರುಚಿತ್ರವಿದು. ಬೆಚ್ಚಿ ಬೀಳಿಸುವುದು ಈ ಚಿತ್ರದ ಶಕ್ತಿಯೂ ಹೌದು; ಮಿತಿಯೂ ಹೌದು.**

■ ಗೌರಿ

ಹಸಿರು ಚಟ್ನಿ ಮಾಡುವುದೇನು ಕಷ್ಟ? ದನಿಯಾ, ಪುದಿನಾ, ಹುಣಸೆ, ಹಸಿಮೆಣಸು, ಲಿಂಬು ಇಷ್ಟಿದ್ರೆ ಸಾಕು. ಆದ್ರೆ ಅವೆಲ್ಲವೂ ಮನೆಯ ಹಿತ್ತಿಲಲ್ಲಿಯೇ ಬೆಳೆದಿರಬೇಕು.

ಈ ವಿವರ ಕೇಳಿ ಚಟ್ನಿ ಮಾಡುವುದೇನು ಕಷ್ಟ ಎಂದು ನಮಗೂ ಅನಿಸುವುದು ಸಹಜ. ಆದರೆ ಈ ಎಲ್ಲವನ್ನು ಬೆಳೆದ ಮನೆಯ ಹಿತ್ತಿಲ ಮಣ್ಣು ಪೌಷ್ಟಿಕಗೊಂಡಿರುವುದು ಮನುಷ್ಯನನ್ನು ಕೊಂದು ಹೂತಿದ್ದರಿಂದ ಎಂದು ಗೊತ್ತಾದರೆ? ಹಿತ್ತಿಲ ಹಸಿರು ಗಿಡಗಳು, ಅದರಲ್ಲಿ ಬೆಳೆದ ಕೆಂಪು ಮೆಣಸಿನಕಾಯಿ ಎಲ್ಲವೂ ಬೇರೆಯದೇ ರೀತಿಯಲ್ಲಿ ಕಾಣುತ್ತವಲ್ಲವೇ?

ಪಕೋಡದ ಜೊತೆಗಿನ ಚಟ್ನಿಯ ಸ್ವಾದಕ್ಕೂ ಮನುಷ್ಯನ ಹತ್ಯೆಗೂ ಇರುವ ಸಂಬಂಧದ ಎಳೆ ಬಿಚ್ಚಿಡುತ್ತಲೇ ಹರಿತಗೊಳ್ಳುತ್ತ ಹೋಗುವ ಕಿರುಚಿತ್ರ ‘ಚಟ್ನಿ’.

ಜ್ಯೋತಿ ಕಪೂರ್ ದಾಸ್ ನಿರ್ದೇಶನದ ಹದಿನಾರು ನಿಮಿಷದ ಈ ಕಿರುಚಿತ್ರ ತುಂಬ ತಣ್ಣನೆಯ ವಾತಾವರಣದಲ್ಲಿ ಶುರುವಾಗಿ ಅಷ್ಟೇ ತಣ್ಣನೆಯ ಕ್ರೌರ್ಯದ ವಿರಾಟ್ ದರ್ಶನದಲ್ಲಿ ಕೊನೆಗೊಳ್ಳುತ್ತದೆ. ಈ ಕ್ರೂರ ಕಥೆಯನ್ನೂ ಯಾವುದೋ ಚಂದಮಾಮನ ಕಥೆ ಎಂಬಂತೆ ನಿರ್ಲಿಪ್ತವಾಗಿ ನಮ್ಮ ಮುಂದಿಡುತ್ತದೆ.

‘ಚಟ್ನಿ’ ಕಿರುಚಿತ್ರ ಶುರುವಾಗುವುದೇ ‘ಮಾಡೆಲ್ ಟೌನ್’ನ ‘ಎಲೈಟ್ ಕ್ಲಬ್’ನ ಒಂದು ಪಾರ್ಟಿಯ ಮೂಲಕ. ಹೆಂಗಸರ ಗುಂಪೊಂದರಲ್ಲಿ ಅನಿತಾ ಮತ್ತು ಅವಳ ಗಂಡನ ಕುರಿತು ಚಾಡಿಮಾತು ಆಡುತ್ತಿರುತ್ತಾರೆ. ಆಗ ಅಲ್ಲಿಗೆ ಅನಿತಾ ಬರುತ್ತಾಳೆ. ತಕ್ಷಣ ಅವರ ಮಾತಿನ ಧಾಟಿ ಬದಲಾಗುತ್ತದೆ. ‘ನೀವು ತುಂಬ ಅದ್ಭುತ ದಂಪತಿ. ನಿಮ್ಮ ಕೈಯಡುಗೆ ತುಂಬ ರುಚಿಯಾಗಿರುತ್ತದೆ ಎಂದು ಕೇಳಿದ್ದೇನೆ. ನಾನೂ ಕಲಿತುಕೊಳ್ಳಬೇಕು. ಯಾವಾಗ ನಿಮ್ಮನೆಗೆ ಬರಲಿ?’ ಎಂದು ಒಬ್ಬಳು ಕೇಳುತ್ತಾಳೆ. ಮರುದಿನ ಅಡುಗೆ ಟಿಪ್ಸ್ ಕೇಳಿಕೊಳ್ಳಲು ಮನೆಗೆ ಬಂದ ಹುಡುಗಿಗೆ ಅನಿತಾ ಪಕೋಡ ಮತ್ತು ಹಸಿರು ಚಟ್ನಿ ತಿನ್ನಲು ಕೊಟ್ಟು ಒಂದು ಕಥೆ ಹೇಳುತ್ತಾಳೆ. ಆ ಕಥೆ ಕೊನೆಗೊಳ್ಳುವ ಕೊನೆಯವರೆಗೂ ಚಟ್ನಿ ಪಕೋಡ ತಿನ್ನುತ್ತಲೇ ಇದ್ದ ಆ ಹುಡುಗಿ ಕೊನೆಯಲ್ಲಿ ಬೆಚ್ಚಿಬೀಳುತ್ತಾಳೆ. ತಾನು ಮೆಚ್ಚಿ ಆಸ್ವಾದಿಸಿದ್ದ ಈ ಹಸಿರು ಚಟ್ನಿ ಬೆಳೆದಿದ್ದು ವ್ಯಕ್ತಿಯೊಬ್ಬನ ಮೃತದೇಹ ಕೊಳೆತ ಮಣ್ಣಿನ ಮೇಲೆ ಬೆಳೆದಿದ್ದು; ಆ ವ್ಯಕ್ತಿ ಸಾವು ಸಹಜವಲ್ಲ, ಕೊಲೆ ಎಂಬುದು ಗೊತ್ತಾದರೆ ಯಾರು ತಾನೆ ಬೆಚ್ಚಿ ಬೀಳುವುದಿಲ್ಲ?



ಜ್ಯೋತಿ ಕಪೂರ್ ದಾಸ್

ಹೆಸರು: ಚಟ್ನಿ
ನಿರ್ದೇಶನ: ಜ್ಯೋತಿ ಕಪೂರ್ ದಾಸ್
ನಿರ್ಮಾಣ: ಟಿಸ್ಕಾ ಚೋಪ್ರಾ
ಸಂಕಲನ: ಮೋನಿಶಾ ಆರ್. ಬಲ್‌ದಾವಾ
ಛಾಯಾಗ್ರಹಣ: ಅನಿಕ್‌ರಾಮ್ ವರ್ಮಾ, ಇಶಾನ್ ಘೋಷ್
ಧ್ವನಿ: ರಾಜೇಶ್ ಸಾವಂತ್, ಸಂತೋಷ್ ಮಿಶ್ರಾ
ತಾರಾಬಳಗ: ಸುಮಿತ್ ಗುಲಾಟಿ, ಆಕಾಶ್ ಭಾರದ್ವಾಜ್, ದೇವೇಶ್ ರಂಜನ್, ಶಶಿ ಶೇಖರ್

ಜನಪ್ರಿಯತೆಯ ಹಿಂದಿನ ಕ್ರೌರ್ಯ, ರುಚಿಯ ಹಿಂದಿನ ಪಾಪಗಳ ಸುರುಳಿಯನ್ನು ಸರಿ ತಪ್ಪುಗಳನ್ನು ನಿರ್ಧರಿಸುವ ಹಂಗಿಲ್ಲದೆ ಬೆಚ್ಚಿಬೀಳಿಸುವ ಹಾಗೆ ತೋರಿಸುತ್ತದೆ ಈ ಕಿರುಚಿತ್ರ.

ಮುಖ್ಯ ಕಥನದ ಹೊರತಾಗಿ ಉಳಿದ ಪಾತ್ರಗಳ ಪೋಷಣೆ ಮತ್ತು ವರ್ತನೆಯೂ ಈ ಚಿತ್ರಕ್ಕೆ ಹಲವು ಕವಲುಗಳನ್ನು ಸೇರಿಸುತ್ತ ಹೋಗುತ್ತವೆ. ಅನಿತಾ ಮನೆಯಲ್ಲಿ ಅಡುಗೆ ಮಾಡುವ ಹುಡುಗ ಕೂಲ್ ಡ್ರಿಂಕ್ಸ್‌ನಲ್ಲಿ ಎಂಜಲು ಉಗಿದು ತಂದುಕೊಡುತ್ತಾನೆ. ಆದರ್ಶ ದಾಂಪತ್ಯದ ಕುರಿತು ಪ್ರಶಂಸನೆ ಕೇಳಿ ಮುಗಿಸಿದ ಗಂಡು ಮರುದೃಶ್ಯದಲ್ಲಿಯೇ ಬೇರೆ ಹುಡುಗಿಯೊಂದಿಗೆ ಫ್ಲರ್ಟ್ ಮಾಡುತ್ತಿರುತ್ತಾನೆ. ಅದೆಲ್ಲಿಂದಲೋ ಕರೆದುಕೊಂಡು ಬಂದ ಅಡುಗೆಯ ಹುಡುಗ ತನ್ನ ಹೆಂಡತಿಯ ಹಾದರ ನೋಡಿದ ಮೇಲೂ ತಾನೇ ಕೊಲೆಯಾಗುತ್ತಾನೆ. ನೇರ ಕಥನಕ್ಕೆ ಭಿನ್ನ ಧ್ವನಿಯನ್ನು ಆಯಾಮವನ್ನು ಕೊಡುವ ಹಲವು ಕಿಡಿಗಳು ಬಹುಸೂಕ್ಷ್ಮವಾಗಿ ಈ ಕಿರುಚಿತ್ರದುದ್ದಕ್ಕೂ ಚಾಚಿಕೊಂಡಿವೆ.

ಆದರೆ ಈ ಕಿಡಿಗಳು ಬಿಡಿಯಾಗಿ ಸೂಚಿಸುವ ಅರ್ಥಸೂಕ್ಷ್ಮತೆ ಇಡೀ ಚಿತ್ರಕ್ಕೆ ಅನ್ವಯಿಸುವುದು ಕಷ್ಟ. ಬೆಚ್ಚಿ ಬೀಳಿಸುವುದು ಈ ಚಿತ್ರದ ಹೆಚ್ಚುಗಾರಿಕೆ ಹೇಗಾಗಿದೆಯೋ ಮಿತಿಯೂ ಆಗಿದೆ.

ಮುಗ್ಧನೊಬ್ಬನ ಮೃತದೇಹದ ಮೇಲೆ ಬೆಳೆದ ತರಕಾರಿ ಗಿಡಗಳಂತೆ, ಇಡೀ ಮಹಾನಗರವೂ ಅಂಥ ಹಲವು ಅಮಾಯಕರ ಜೀವ–ಜೀವನಗಳನ್ನು ತುಳಿದು ‘ಎಲೈಟ್’ ಆಗಿ ಕಂಗೊಳಿಸುತ್ತಿದೆ ಎಂಬ ಕ್ರೂರವಾಸ್ತವವನ್ನೂ ತೋರಿಸುವ ಹಾಗೆ ಈ ಕಿರುಚಿತ್ರದ ಮುಕ್ತಾಯವಿದೆ.

ಈ ಕಿರುಚಿತ್ರ ವೀಕ್ಷಣೆಗೆ bit.ly/2g4qFHR ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.